# NALANDA PU COLLEGE

*Press Coverage of Nalanda PU College*

*Students Got Good Results in II PU Results*

ಹೊಸ ದಿಗಂತ

14

18 Apr 2019

## ನಳಂದಾ ಕಾಲೇಜು ಉತ್ತಮ ಸಾಧನೆ



**ಹುಬ್ಬಳ್ಳಿ:** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ನಳಂದಾ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದು ಗಮನಸೆಳೆದಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳಾದ ಡಿ.ರಿಹಾನಾ (582), ಆರ್.ಬಸವರಾಜೇಶ್ವರಿ (580), ಎ.ಎಂ.ವಿದ್ಯಾ (574), ಅಶ್ವಿನಿ ಕಲ್ಯಾಣಿ (567), ಶ್ರವಣ್ ಕುಮಾರ್ ಚೌಧರಿ (557), ವಿನೋದ್ ಅಶೋಕ್ (556), ಶಿರನ್ ಕೌಸರ್ (551) ಅಂಕಗಳನ್ನು ಪಡೆದು ಕಾಲೇಜಿನ ಹಾಗೂ ಪಾಲಕರ ಕೀರ್ತಿ ಹೆಚ್ಚಿಸಿದ್ದಾರೆ. ಅತ್ಯುತ್ತಮ ಶ್ರೇಣಿಯಲ್ಲಿ ಕಾಲೇಜಿನ 38 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮೊದಲ ದರ್ಜೆಯಲ್ಲಿ 189 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಕಾಲೇಜು ಪ್ರಾಚಾರ್ಯರು ತಿಳಿಸಿದ್ದಾರೆ.

ವಿಜಯವಾಣಿ ನಂ 1

# ಪಿಯು ಪರೀಕ್ಷೆಯಲ್ಲಿ ನಲಂದ ಕಾಲೇಜ್ ಸಾಧನೆ

**ಹುಬ್ಬಳ್ಳಿ:** ವಿದ್ಯಾನಗರ ಶಿರೂರಪಾರ್ಕ್ ಅಕ್ಷಯ ಕಾಲನಿಯ ನಲಂದ ಪದವಿ ಪೂರ್ವ ಮಹಾ ವಿದ್ಯಾಲಯದ ವಿದ್ಯಾರ್ಥಿನಿ ರಿಹಾನಾ ರೇಹಮಾಣ್ಣವರ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ ಶೇ. 97 ಅಂಕ ಪಡೆದು ಕಾಲೇಜಿಗೆ ಪ್ರಥಮ, ಜಿಲ್ಲೆಗೆ ತೃತೀಯ ಸ್ಥಾನ ಪಡೆದಿದ್ದಾಳೆ ಎಂದು ಪ್ರಾಚಾರ್ಯ ಜಿ. ಶ್ರೀನಿವಾಸ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಿಹಾನಾ ಪಿಸಿಎಂಎಸ್ ನಲ್ಲಿ 99.25 ಅಂಕ ಪಡೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾಳೆ ಎಂದರು. ಆರ್. ಬಸವರಾಜೇಶ್ವರಿ ಶೇ. 96.66 ಅಂಕ ಗಳಿಸಿದ್ದು, ಪಿಸಿಎಂಬಿ ಯಲ್ಲಿ ಶೇ. 98 ಅಂಕ ಪಡೆದು ಕಾಲೇಜಿಗೆ ದ್ವಿತೀಯ ಸ್ಥಾನ ಹಾಗೂ ಲಿಖಿತಾ ಜೈನ್ ಶೇ. 91.16 ಅಂಕ ಪಡೆದಿದ್ದು, ಪಿಸಿಎಂಬಿ ಯಲ್ಲಿ ಶೇ. 96 ಅಂಕ ಪಡೆದು ಕಾಲೇಜಿಗೆ ತೃತೀಯ


ರಿಹಾನಾ


ಬಸವರಾಜೇಶ್ವರಿ


ಲಿಖಿತಾ


ಅರುಣ


ವಿದ್ಯಾ


ರೀಧಾ

ಸ್ಥಾನ ಬಂದಿದ್ದಾಳೆ ಎಂದರು. ಪಿಯುಸಿ ಪ್ರವೇಶಾತಿ ವೇಳೆ ಕಾಲೇಜು ನಡೆಸುವ ಟ್ಯಾಲೆಂಟ್ ಪರೀಕ್ಷೆಯಲ್ಲಿ ಪಾಸಾಗಿ ಶುಲ್ಕ ರಿಯಾಯಿತಿಯಡಿ ಪ್ರವೇಶ ಪಡೆದ, ಬಡತನ ಕುಟುಂಬದ ಅರುಣ ಸಂಗೂರ ಶೇ. 85 ಅಂಕ ಗಳಿಸಿದ್ದು, ಗಣಿತದಲ್ಲಿ 100ಕ್ಕೆ 100 ಅಂಕ ಪಡೆದು ಗಮನ ಸೆಳೆದಿದ್ದಾನೆ ಎಂದರು.

ವಾಣಿಜ್ಯ ವಿಭಾಗದಲ್ಲಿ ವಿದ್ಯಾ ಮೂಲೇರ ಶೇ. 95.06, ರೀಧಾ ಪಲ್ಲನ್ ಶೇ. 91.16 ಅಂಕ ಪಡೆದಿದ್ದಾಳೆ. ಕಾಲೇಜಿನ ವಿಜ್ಞಾನ ವಿಭಾಗದ ಒಟ್ಟು ಫಲಿತಾಂಶ ಶೇ. 94.25 ರಷ್ಟಾಗಿದ್ದು 28 ಉನ್ನತ ಶ್ರೇಣಿ, 142 ಪ್ರಥಮ ಶ್ರೇಣಿ, 2 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಒಟ್ಟಾರೆ ಫಲಿತಾಂಶ ಶೇ. 97.33 ರಷ್ಟಾಗಿದೆ. 10 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 47 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ತಿಳಿಸಿದರು.

ಮಧುಮೋಹನ ರಡ್ಡಿ, ಶೃತಿ ಪಾಟೀಲ, ಭಾರತಿ ನಾಯ್ಡು, ಅಕ್ಷಯ ಕುಂತೆ, ರಾಜಕುಮಾರ ಹಿತ್ತಲರ ಸುದ್ದಿಗೋಷ್ಠಿಯಲ್ಲಿದ್ದರು.

# ನಲಂದ ಕಾಲೇಜಿನ ರಿಹಾನಾ ಜಿಲ್ಲೆಗೆ ಮೂರನೇ ಸ್ಥಾನ

ಹುಬ್ಬಳ್ಳಿ: ವಿದ್ಯಾನಗರ ಅಕ್ಷಯ ಕಾಲೋನಿ ಶಿರೂರ ಪಾರ್ಕ್ ರಸ್ತೆಯ ನಲಂದ ವಿಜ್ಞಾನ ಮತ್ತು ವಾಣಿಜ್ಯ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ರಿಹಾನಾ ಡಿ. ರೇಹಮಾಣ್ಣವರ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಜಿಲ್ಲೆಗೆ 3ನೇ ಸ್ಥಾನ ಪಡೆದಿದ್ದಾಳೆ ಎಂದು ಕಾಲೇಜಿನ ಪ್ರಾಂಶುಪಾಲ ಜಿ. ಶ್ರೀನಿವಾಸ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಿಹಾನಾ ಶೇ. 97 ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದು, ಪಿಸಿಎಂಬಿಯಲ್ಲಿ ಶೇ. 99.25 ಅಂಕ ಪಡೆದಿದ್ದಾಳೆ. ಇನ್ನುಳಿದಂತೆ ಆರ್. ಬಸವರಾಜೇಶ್ವರಿ (ಶೇ.96.66) ದ್ವಿತೀಯ ಹಾಗೂ ಲಿಖಿತಾ ಬಿ. ಜೈನ (ಶೇ. 91.16) ತೃತೀಯ ಸ್ಥಾನ ಪಡೆದಿದ್ದಾಳೆ. ವಿಜ್ಞಾನ


ರಿಹಾನಾ


ಬಸವರಾಜೇಶ್ವರಿ


ಲಿಖಿತಾ


ವಿದ್ಯಾ


ರೀಧಾ


ಅರುಣ

ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 172 ವಿದ್ಯಾರ್ಥಿಗಳಲ್ಲಿ 28 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 142 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, ಇಬ್ಬರು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಒಟ್ಟಾರೆ ಶೇ. 94.25 ಫಲಿತಾಂಶವಾಗಿದೆ ಎಂದರು.

ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 72 ವಿದ್ಯಾರ್ಥಿಗಳಲ್ಲಿ 10 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 47 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 13 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಒಟ್ಟಾರೆ ಶೇ.97.33 ಫಲಿತಾಂಶವಾಗಿದೆ. ಇವರಲ್ಲಿ ವಿದ್ಯಾ ಎ. ಮೂಲೇರ ಶೇ. 95.6 ಅಂಕಗಳೊಂದಿಗೆ ಕಾಲೇಜಿಗೆ ಪ್ರಥಮ, ರೀಧಾ ಎ. ಪಲ್ಲನ್ ಶೇ. 91.16 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾಳೆ. ಅರುಣ ಜಿ. ಸಂಗೂರ ಎಂಬಾತ ಶೇ. 85 ಅಂಕ ಪಡೆದಿದ್ದು, ಗಣಿತಶಾಸ್ತ್ರದಲ್ಲಿ 100ಕ್ಕೆ 100 ಅಂಕ ಪಡೆದಿದ್ದು ಹೆಮ್ಮೆಯ ವಿಷಯ. ಈತ ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಪಡೆದಿದ್ದಾನೆ. ತಂದೆ ಕೂಲಿಕಾರ್ಮಿಕರಾಗಿದ್ದು, ತಾಯಿ ಬಳೆ ವ್ಯಾಪಾರ ಮಾಡಿಕೊಂಡಿದ್ದಾರೆ ಎಂದರು.

ಕಾಲೇಜು ವತಿಯಿಂದ ನಡೆಸುವ ಪ್ರತಿಭಾ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳೊಂದಿಗೆ ಉತ್ತೀರ್ಣರಾದ ಮೊದಲ ಐದು ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ನೀಡಲಾಗುವುದು ಎಂದು ತಿಳಿಸಿದರು.

ರಿಹಾನಾ ರೇಹಮಾಣ್ಣವರ ಮಾತನಾಡಿ, ಕಾಲೇಜಿನ ಶಿಕ್ಷಕ ವೃಂದ ಹಾಗೂ ಪಾಲಕರ ಪ್ರೋತ್ಸಾಹ, ಬೆಂಬಲದಿಂದ ಉತ್ತಮ ಸಾಧನೆ ಮಾಡಲು ಸಾಧ್ಯವಾಯಿತು. ಮುಂದೆ ಸಾಫ್ಟ್‌ವೇರ್ ಎಂಜಿನಿಯರ್ ಇಲ್ಲವೆ ಗಗನಸಖಿ ಆಗಬೇಕು ಎಂದುಕೊಂಡಿದ್ದೇನೆ ಎಂದಳು. ಕನ್ನಡ ಪ್ರಾಧ್ಯಾಪಕ ರಾಜಕುಮಾರ ಹಿತ್ತಲ ಹಾಗೂ ವಿದ್ಯಾರ್ಥಿಗಳ ಪಾಲಕರು ಉಪಸ್ಥಿತರಿದ್ದರು.

**ಗಳಗಿಹುಲಕೊಪ್ಪದ ಶ್ರೀಮತಿ ಶಿವರಾಜದೇವಿ ಕಾಲೇಜು ಶೇ. 74**